ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದಾಯ ವಿನಾಯಿತಿ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಉಳಿದಂತಹ ಸಿದ್ಧತಾ ಕಾರ್ಯಕ್ರಮಗಳ ಬಗ್ಗೆ ಉಪ ಸಮಿತಿಗಳನ್ನು ಸದ್ಯದಲ್ಲೇ ರಚಿಸಲಾಗುವುದು.

ಊ) ಸಾಧ್ಯತೆಯಿರಲಿಲ್ಲ.

ಹುಳಿಯೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಮಂಜೂರಾತಿ

561 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ತುಮಕೂರು ಜಿಲ್ಲೆ ಹುಳಿಯಾರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗಾಗಿ ನಿವೇಶನವನ್ನು ದಾನಿಗಳಿಂದ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *199-96ನೇ ಸಾಲಿನ ಅಯವ್ಯಯದಲ್ಲಿ ಕಟ್ಟಡದ ನಿರ್ಮಾಣಕ್ಕಾಗಿ ಹಣ ಒದಗಿಸಿ ಕಟ್ಟಡ ನಿರ್ಮಾಣಕ್ಕಾಗಿ ಸಹಾಯ ಮಾಡಲಾಗುವುದೇ;*

ಇ) *ಹಾಗಿದ್ದಲ್ಲಿ, ಈ ಪ್ರಸಕ್ತ ಸಾಲಿನಲ್ಲಿ ಸದರಿ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿ ಮತ್ತು ನಕ್ಷೆ ಸ್ವೀಕೃತವಾದ ನಂತರ ಪರಿಶೀಲಿಸಲಾಗುವುದು.

ಇ) 1995-96ನೇ ಸಾಲಿನ ಅಯವ್ಯಯದಲ್ಲಿ ಯಾವುದೇ ಹೊಸ ಕಾಮಗಾರಿಗಳಿಗೆ ಅನುದಾನವಿರುವುದಿಲ್ಲ.

ಬರಡು ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವುದರಿಂದ ಉಂಟಾದ ತೊಂದರೆ

570 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದ ಬರಡು ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ;*

ಆ) *ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವುದರಿಂದ ಅರಣ್ಯ ಭೂಮಿಯ ಪ್ರಮಾಣ ಕಡಿಮೆಯಾಗುವುದರ ಜೊತೆಗೆ ಪರಿಸರ ಅಸಮತೋಲನ ಉಂಟಾಗುವುದರಿಂದ ಇಂತಹ ಭೂಮಿಯನ್ನು ಅರಣ್ಯ ಬೆಳೆಸಲು ಅಭಿವೃದ್ಧಿ ಪಡಿಸಲಾಗುವುದೇ;*

ಇ) *ಹಾಗಿಲ್ಲದಿದ್ದಲ್ಲಿ, ಇಂತಹ ಭೂಮಿಗಳಲ್ಲಿ ಗ್ರಾಮೀಣ ಪ್ರದೇಶದ ಬಡ ಜನರು ಜೀವನ ನಡೆಸುತ್ತಿರುವುದರಿಂದ ಅವರಿಗೆ ಈ ಭೂಮಿಯನ್ನು ವಹಿಸಿಕೊಡುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ

ಆ) ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಈ ಭೂಮಿಯನ್ನು ಅರಣ್ಯ ಬೆಳೆಸಲು, ಅಭಿವೃದ್ಧಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಇಲ್ಲ